<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಡಿಬಂಡೆ</u>

**<u>ಸಿ.ಸಿ. ಸಂಖ್ಯೆಃ 262/2020</u>**

**<u>ಸಿ ಡಬ್ಲ್ಯೂಃ 5 ಪಿ ಡಬ್ಲ್ಯೂಃ 5</u>**

| | | |
|---|---|---|
| ಸಾಕ್ಷಿದಾರರ ಹೆಸರು | :: | ವೆಂಕಟೇಶ್ |
| ತಂದೆಯ ಹೆಸರು | :: | ದ್ಯಾವಪ್ಪ |
| ವಯಸ್ಸು | :: | 42 ವರ್ಷ |
| ಉದ್ಯೋಗ | :: | ಕೂಲಿ |
| ವಾಸ ಸ್ಥಳ | :: | ಗಂಗೇನಹಳ್ಳಿ |

ದಿನಾಂಕಃ 14-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ</u>*

ಚಾಸಾ -6 ರವರ ಪರಿಚಯ ನನಗೆ ಇರುತ್ತದೆ.

ಸಾಕ್ಷಿಯು ನಿಪಿ-4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಯನ್ನು ನಿಪಿ-4 (ಬಿ) ಎಂದು ಗುರುತಿಸಲಾಯಿತು .

ಸುಮಾರು 4-5 ವರ್ಷಗಳ ಹಿಂದೆ ನಾನು ನಮ್ಮ ಗ್ರಾಮದಲ್ಲಿ ಪೋಲೀಸರ ಕೋರಿಕೆಯ ಮೇರಗೆ ನಿಪಿ-4 ಕ್ಕೆ ಸಹಿಯನ್ನು ಮಾಡಿರುತ್ತೇನೆ. ಸದರಿ ದಾಖಲಾತಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪೋಲೀಸರು ನನಗೆ ಓದಿ ತಿಳಿಸಿರುವುದಿಲ್ಲ.

ನನ್ನ ಸಮಕ್ಷಮದಲ್ಲಿ ಪೋಲೀಸರು ಏನನ್ನೂ ಅಮಾನತ್ತು ಪಡಿಸಿ ಕೊಂಡಿರುವುದಿಲ್ಲ.

*(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ, ಆದ್ದರಿಂದ ಪಾಟೀ ಸವಾಲಿಗೆ ಅನುಮತಿಸಲಾಯಿತು. )*

*<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ</u>*

ದಿನಾಂಕ 08-01-2020 ರಂದು ಚಾಸಾ-8 ರವರು ಘಟನಾ ಸ್ಥಳಕ್ಕೆ ಬಂದು ನನ್ನನ್ನು ಮತ್ತು ಚಾಸಾ-6 ರವರನ್ನು ಸ್ಥಳಕ್ಕೆ ಬರ ಮಾಡಿಕೊಂಡು ಈ ಕೇಸಿನ ಸಂಗತಿಗಳನ್ನು ನಮಗೆ ತಿಳಿಸಿ ಪಂಚರಾಗಿ ಸಹಕರಿಸುವಂತೆ ನಮ್ಮನ್ನು ಕೊರಿದ್ದು ಅದಕ್ಕೆ ನಾವು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ-8 ರವರು ಸ್ಥಳದಲ್ಲಿ ನಮ್ಮ ಸಮಕ್ಷಮ ಸ್ಥಳ ಪಂಚನಾಮೆಯನ್ನು ನಿಪಿ-4 ರಂತೆ ಮಹಜರ್ ಕ್ರಮ ಜರುಗಿಸಿ ನನ್ನ ಮತ್ತು ಚಾಸಾ-6 ರವರ ಸಹಿಗಳನ್ನು ಪಡೆದರು ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ ಕಾರಣ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

<u>(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)</u>

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,

ಗುಡಿಬಂಡೆ,

ಚಾಸಾ -1 ಮತ್ತು 2 ರವರ ಪರಿಚಯ ನನಗೆ ಇರುತ್ತದೆ.

ಆರೋಪಿತರು ನನಗೆ ಪರಿಚಯ ಇರುತ್ತದೆ.

ಈ ಕೇಸಿನ ವಿಚಾರ ನನಗೆ ಏನು ಗೊತ್ತಿಲ್ಲ.

ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

*(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ, ಆದ್ದರಿಂದ ಪಾಟೀ ಸವಾಲಿಗೆ ಅನುಮತಿಸಲಾಯಿತು. )*

*ಪಾಟೀ ಸವಾಲುಃಃ ಮಾನ್ಯ ಸಹಾಯಕ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃಃ*

ದಿನಾಂಕ 28-04-2016 ರಂದು ಬೆಳಗ್ಗೆ ನನನ್ನು ನಮ್ಮ ಗ್ರಾಮದ ಚೌಡಪ್ಪ ಬಿನ್ ವೆಂಕಟರಾಯಪ್ಪ , ತೂಮಕುಂಟೆ ಮಂಜುನಾಥ ರವರನ್ನು 1 ನೇ ಆರೋಪಿಯು ಕೆಎ -40-ಟಿ- 7587 / 7588 ರ ಟ್ರಾಕ್ಟರ್ ಮತ್ತು ಟ್ರಾಲಿಗೆ ಮಣ್ಣು ತುಂಬಲು ಕೂಲಿ ಕೆಲಸಕ್ಕೆ ಕರೆದಿದ್ದರೂ ಎಂದರೆ ಸರಿಯಲ್ಲ. ಅದರಂತೆ ನಾವುಗಳು ಮಣ್ಣು ತುಂಬಲು ಕೂಲಿ ಕೆಲಸಕ್ಕೆ ಹೋಗಿದ್ದು ಚಾಲಕ ಶಿವಪ್ಪನವರು ಟ್ರಾಕ್ಟರ್ ನಲ್ಲಿ ನಮ್ಮನ್ನು ಕೂರಿಸಿಕೊಂಡು ಚಿಕ್ಕಬಳ್ಳಾಪುರ ತಾ - ಚಿತ್ರಾವತಿಯ ನದಿಯ ಹಳ್ಳಕ್ಕೆ ಕರೆದುಕೊಂಡು ಹೋಗಿ ಹಳ್ಳದಲ್ಲಿ ಟ್ರಾಕ್ಟರ್ ಅನ್ನು ನಿಲ್ಲಿಸಿ ಮಣ್ಣನ್ನು ಟ್ರಾಕ್ಟರ್ ಗೆ ಲೋಡ್ ಮಾಡಲು ತಿಳಿಸಿದರು ಎಂದರೆ ಸರಿಯಲ್ಲ. ಅದರಂತೆ ನಾನು ಮಂಜುನಾಥ, ಚೌಡಪ್ಪ ನವರು ಗುಣಿಯಲ್ಲಿ ಮಣ್ಣನ್ನು ತೆಗೆದು ಟ್ರಾಕ್ಟರ್ ಗೆ ಲೋಡ್ ಮಾಡುತ್ತಿದ್ದಾಗ ಮದ್ಯಾಹ್ನ 1-00 ಗಂಟೆ ಸಮಯದಲ್ಲಿ ಆರೆ ಇಂದ ಮಣ್ಣನ್ನುಚೌಡಪ್ಪ ಹಗೆಯುತ್ತಿದ್ದಾಗ ಮೇಲ್ಭಾಗದ ಮಣ್ಣಿನ ದಿಬ್ಬು ಆಕಸ್ಮಿಕವಾಗಿ ಕುಸಿದು ಮಣ್ಣು ಗುಣಿಯಲ್ಲಿ ಇದ್ದ ಮಂಜುನಾಥ, ಮತ್ತು ಚೌಡಪ್ಪ ರವರ ಮೇಲೆ ಬಿದ್ದು ನಾವು ಮಣ್ಣಿನಲ್ಲಿ ಊತ ಹೋದರು ಎಂದರೆ ನನಗೆ ಗೊತ್ತಿಲ್ಲ. ಅಗ ಅಲ್ಲಿಯೇ ಇದ್ದ ನಾನು ಟ್ರಾಕ್ಟರ್ ಚಾಲಕ ಶಿವಪ್ಪ ನವರು

ಕೂಗಿಕೊಂಡು ಕುರಿಗಳನ್ನು ಮೇಯಿಸಲು ಬಂದಿದದ್ದ ಚಾಸಾ -5 ರಿಂದ 7 ರವರು ಬಂದು ಮಂಜುನಾಥ ಮತ್ತು ಚೌಡಪ್ಪನ ಮೇಲೆ ಬಿದ್ದಿದ್ದ ಮಣ್ಣಿನ ಗಡ್ಡೆಯನ್ನು ತೆಗೆದು ಅವರನ್ನು ಹೊರಕ್ಕೆ ತೆಗೆದು ಅವರನ್ನು ಉಪಚರಿಸಿ ನೋಡಲಾಗಿ ಚೌಡಪ್ಪನಿಗೆ ಎದೆಯ ಬಾಗದಲ್ಲಿ ಬುಜದ ಮೇಲೆ, ಸೊಂಟದ ಮೇಲ್ಭಾಗದಲ್ಲಿ ಗಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಂಜುನಾಥ ರವರ ಹೊಟ್ಟೆಯ ಬಾಗದಲ್ಲಿ ತೀರ್ವ ಸ್ವರೂಪದ ಒತ್ತಡದ ಗಾಯವಾಗಿದ್ದು ಬಲ ಕಾಲಿನ ಪಾದದ ಮೇಲೆ ರಕ್ತ ಗಾಯವಾಗಿರುತ್ತದೆ ಎಂದರೆ ಗೊತ್ತಿಲ್ಲ.

ನಂತರ ಅವರನ್ನು ನಾವು ಚಿಕಿತ್ಸೆಗಾಗಿ ಆಂಬುಲೆನ್ಸ್ ನಲ್ಲಿ ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಲು ಆಂಬುಲೆನ್ಸ್ ಗೆ ಹತ್ತಿಸುತ್ತಿದ್ದಾಗ ಚೌಡ್ವಪ ನವರು ಅಲ್ಲಿಯೇ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಂಜುನಾಥ ರವರನ್ನು ಬೆಂಗಳೂರಿನ ಎಮ್ ಎಸ್ ರಾಮಯ್ಯ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆಎ -40-ಟಿ-7587 / 7588 ರ ಟ್ರಾಕ್ಟರ್ ಮತ್ತು ಟ್ರಾಲಿಯ ಮಾಲಿಕ ಹಾಗೂ ಚಾಲಕರಾದ ಆರೋಪಿತರು ಮಣ್ಣನ್ನು ತುಂಬಲು ಯಾವುದೇ ಮುಂಜಾಗ್ರತೆ ಕ್ರಮಗಳನ್ನು ಕೈ ಗೊಳ್ಳದೆ ಅಜಾಗ್ರತೆ ಇಂದ ಮಣ್ಣನ್ನು ತುಂಬಿಸುತ್ತಿದ್ದ ಪರಿಣಾಮ ಆಕಸ್ಮಿಕವಾಗಿ ಮಣ್ಣಿನ ದಿಬ್ಬು ಕುಸಿದು ಚೌಡಪ್ಪ ನವರು ಮೃತ ಪಡಲು ಹಾಗೂ ಮಂಜನಾಥ ರವರಿಗೆ ತೀರ್ವ ಸ್ವರೂಪದ ಗಾಯಗಳಾಗಲು ಕಾರಣರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಅಪಘಾತಕ್ಕೂ ದೇವಗಾನಹಳ್ಳಿಯ ಬಾಲ ಸುಬ್ರಮಣ್ಯಂ ನವರಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದು ಈಗ ಓದಿ ಹೇಳಿ ಸೂಚಿಸಿದ ನಿಪಿ - 5 ರಂತೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ .

ನಾನು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿರುತ್ತೇವೆ ಎಂದರೇ ಸರಿ .

ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಮತ್ತು ಆರೋಪಿಗಳು ರಾಜಿ ಮಾಡಿ ಕೊಂಡು ಸುಳ್ಳುಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲು:: ಆರೋಪಿಗಳ ಪರ ವಕೀಲರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ

ಎಂದು ಹೇಳಿರುತ್ತಾರೆ.  ಆದ ಕಾರಣ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃಃ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,

ಗುಡಿಬಂಡೆ,

ಗುಡಿಬಂಡೆ,

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸದರಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಆದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ. ಸದರಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಆದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ದಿನಾಂಕ 23-02-2016 ರಂದು –-------------------- ಆಸ್ಪತ್ರೆಗೆ ದಾಖಲಿಸಿರುತ್ತೇನೆ ಎಂದು ಈ ಮೇಲೆ ಓದಿ ಹೇಳಿದ ಪ್ರಕಾರ ನೀವು ಪೋಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿದ್ದೀರಿ

ಎಂದರೇ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲೆಗೆಳೆದ ಕಾರಣ ಸಾಕ್ಷಿಯ ಮರುಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು.